# ರಾಮಕೃಷ್ಣ ಮಿಷನ್ ಸೇವಾಶ್ರಮ (ಉಚಿತ ಆಸ್ಪತ್ರೆ)

**ಸ್ವಾಮಿ ವಿವೇಕಾನಂದ ಮಾರ್ಗ, ಬೃಂದಾವನ, ಮಥುರಾ ಜಿಲ್ಲೆ, ಉತ್ತರ ಪ್ರದೇಶ – 281 121**

**ಫೋನ್: 0565–244310, 2443310(ಫ್ಯಾಕ್ಸ್)**

**ಇ–ಮೈಲ್: rkmsvrnd@sancharnet.in; mtr_rkmsvrnd@sancharnet.in ; Website:rkmsvrnd.org**

## ‘ಕಾಲಾ ಬಾಬು ಕುಂಜ್’ – ಒಂದು ಮನವಿ

**ಬೃಂದಾವನ –** ಇದು ಯಮುನೆಯ ತಟದಲ್ಲಿರುವ ಶ್ರೀಕೃಷ್ಣನ ದಿವ್ಯ ಲೀಲಾಸ್ಥಾನ. ಬೃಂದಾವನದ ಪರಿಸರವು ಭಕ್ತರನ್ನು ಉನ್ನತ ಮಟ್ಟದ ಭಕ್ತಿಭಾವದಿಂದ ತುಂಬಿಬಿಡುವುದು. ಈ ಪವಿತ್ರಭೂಮಿಗೆ ಶ್ರೀಕೃಷ್ಣ ಚೈತನ್ಯ ಮತ್ತು ಶ್ರೀರಾಮಕೃಷ್ಣರು ತಮ್ಮ ಅವತಾರ ಕಾಲದಲ್ಲಿ, ಭೇಟಿಕೊಟ್ಟು ಪವಿತ್ರಗೊಳಿಸಿದ್ದಾರೆ. ಶ್ರೀಕೃಷ್ಣನ ದಿವ್ಯಲೀಲಾ ಕ್ಷೇತ್ರವಾದ ಬೃಂದಾವನವು ಭಕ್ತಿಯುಗದ ಮಹಾತ್ಮರಾದ ಸೂರದಾಸ, ಮೀರಾಬಾಯಿ ಹಾಗೂ ರೂಪ ಮತ್ತು ಸನಾತನ ಗೋಸ್ವಾಮಿಗಳ ಸಾಧನಾಕ್ಷೇತ್ರವೂ ಆಗಿದೆ.



ರಾಮಕೃಷ್ಣ ಮಿಷನ್ ಸೇವಾಶ್ರಮವು ಈ ಪುಣ್ಯ ಭೂಮಿಯ ಜನಸಮುದಾಯಕ್ಕೆ 1907 ರಿಂದಲೂ ತನ್ನ ಆಸ್ಪತ್ರೆ ಮತ್ತು ಇತರ ಸೇವಾಕಾರ್ಯಗಳ ಮೂಲಕ ಸೇವೆ ಸಲ್ಲಿಸುತ್ತ ಬಂದಿದೆ.

ಶ್ರೀರಾಮಕೃಷ್ಣರ ನಿಕಟ ಭಕ್ತರಾದ ಬಲರಾಮ ಬಸುವು ಈ ಪವಿತ್ರ ವ್ರಜಭೂಮಿಯಲ್ಲಿ **‘ಕಾಲಾ ಬಾಬು ಕುಂಜ’** ಎಂಬ ಹೆಸರಿನ ತನ್ನ ವಂಶಸ್ಥರ ನಿವಾಸವನ್ನು ಹೊಂದಿದ್ದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ, ಶ್ರೀಮಾತೆ ಶಾರದಾ ದೇವಿಯವರು 1886ರಲ್ಲಿ ಬೃಂದಾವನಕ್ಕೆ ಬಂದಾಗ, ಈ ಮನೆಯಲ್ಲಿ ಸುಮಾರು ಒಂದು ವರ್ಷ ಕಾಲ ತಂಗಿದ್ದರು. ತಮ್ಮ ಮುಂದಿನ ಭೇಟಿಗಳಲ್ಲಿ ಕೂಡ, ಶ್ರೀಮಾತೆಯವರು ಈ ನಿವಾಸದಲ್ಲಿಯೇ ಇರುತ್ತಿದ್ದರು. ಅದಲ್ಲದೆ, ಅವರು ಸ್ವಾಮಿ ಯೋಗಾನಂದರಿಗೆ ಮಂತ್ರದೀಕ್ಷೆಯನ್ನು ಕೊಟ್ಟದ್ದೂ ಇದೇ ಸ್ಥಳದಲ್ಲಿ. ವಿವಿಧ ಕಾಲಘಟ್ಟಗಳಲ್ಲಿ ಸ್ವಾಮಿ ವಿವೇಕಾನಂದ, ಸ್ವಾಮಿ ಬ್ರಹ್ಮಾನಂದ ಮತ್ತಿತರ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರು ಇಲ್ಲಿ ಉಳಿದುಕೊಂಡಿದ್ದರು. 1907 ರಲ್ಲಿ ರಾಮಕೃಷ್ಣ ಮಿಷನ್ನಿನ ಬೃಂದಾವನ ಶಾಖೆ ಆರಂಭಗೊಂಡಿದ್ದೂ ಇದೇ ತಾಣದಲ್ಲಿ.

**‘ಕಾಲಾ ಬಾಬು ಕುಂಜ್’** – ಈ ನಿವಾಸದ ಮಹತ್ವವನ್ನು ಮನಗಂಡು, ಬೃಂದಾವನದ ರಾಮಕೃಷ್ಣ ಮಿಷನ್ ಸೇವಾಶ್ರಮವು ಈ ಮನೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಒಂದು ಸ್ಮಾರಕವನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ. ಇದರಿಂದ ಅಲ್ಲಿ ಸಂನ್ಯಾಸಿಗಳು ಮತ್ತು ಗೃಹಸ್ಥ ಭಕ್ತರು ಉಳಿದುಕೊಂಡು ಈ ಸ್ಥಳದ ಆಧ್ಯಾತ್ಮಿಕ ಪರಿಸರದ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ. ಇತ್ತೀಚಿಗೆ, ಈ ಮನೆಯಲ್ಲಿ ಶ್ರೀಮಾತೆಯವರು ವಾಸ್ತವ್ಯ ಮಾಡಿದ್ದ ಸಣ್ಣ ಭಾಗವನ್ನು 38 ಲಕ್ಷ ರೂಪಾಯಿಗಳಿಗೆ ಕೊಂಡುಕೊಳ್ಳಲಾಯಿತು. ಆದರೆ ಅದರ ಪಕ್ಕದ ಭಾಗವನ್ನು ಕೊಂಡುಕೊಳ್ಳಬೇಕಾಗಿದೆ. ಇಲ್ಲದಿದ್ದರೆ, ಇಡೀ ಯೋಜನೆಯು ಅಪೂರ್ಣವಾಗಿಯೇ ಉಳಿದುಬಿಡುವುದು. ಮನೆಯ ಉಳಿದ ಭಾಗವನ್ನು ಕ್ರಯಕ್ಕೆ ತೆಗೆದುಕೊಳ್ಳುವುದಕ್ಕೆ ಮತ್ತು ಅದರ ನವೀಕರಣಕ್ಕಾಗಿ **ಒಂದು ಕೋಟಿ 30 ಲಕ್ಷ ರೂಪಾಯಿಗಳ ಖರ್ಚು ತಗುಲಬಹುದೆಂದು ಅಂದಾಜು ಮಾಡಲಾಗಿದೆ.**

**ಈ ಪವಿತ್ರ ಕೈಂಕರ್ಯಕ್ಕೆ ತಾವುಗಳು ಉದಾರವಾಗಿ ಧನಸಹಾಯವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಚೆಕ್ ಮತ್ತು ಡ್ರಾಫ್ಟ್‌ಗಳನ್ನು, ‘Ramakrishna Mission Sevashrama, Vrindaban’ – ಈ ಹೆಸರಿಗೆ ಬರೆದು ಕೆಳಗಿನ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ. ದೇಣಿಗೆಗಳಿಗೆ 80–ಜಿ ಅಧಿನಿಯಮದ ಪ್ರಕಾರ ಆದಾಯ ತೆರಿಗೆ ವಿನಾಯಿತಿ ಇರುತ್ತದೆ.**

**Ramakrishna Mission Sevashrama**
**Vrindaban P.O.**
**Dt. Mathura, U.P. 281 121**

**ಸ್ವಾಮಿ ಸುಪ್ರಕಾಶಾನಂದ**
**ಕಾರ್ಯದರ್ಶಿ**